ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಮರಳಿನ ವಿತರಣಾ ವ್ಯವಸ್ಥೆಯ ಬಗ್ಗೆ ಯಾವ ರೀತಿಯನ್ನು ಅನುಸರಿಸಿದ್ದೇವೆ ಎನ್ನುವ ಬಗ್ಗೆ ವಿವರವಾಗಿ ಹೇಳಿದ್ದೇನೆ. ಆ ಕೆಲಸ ಈಗಾಗಲೇ ರಾಜ್ಯದ್ಯಂತ ಎಲ್ಲಾ ಅಸಿಸ್ಟೆಂಟ್ ಕಮೀಷನರ್‌ಗಳು ಅವರವರ ವ್ಯಾಪ್ತಿಯಲ್ಲಿ ಬರುವಂಥದ್ದನ್ನು ಕ್ರಮ ತೆಗೆದುಕೊಂಡು ಅನೇಕ ಕಡೆ ಹರಾಜು ಮಾಡಲಿಕ್ಕೆ ಹೊರಟಿದ್ದಾರೆ. ಜೊತೆಗೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ದಾಸ್ತಾನು ಎಲ್ಲೆಲ್ಲಿ ನಾವು ಗುರುತಿಸುತ್ತೇವೆ, ಮರಳು ವಿತರಣೆಯನ್ನು, ಆ ಪ್ರದೇಶದಿಂದ ಬರುವ ರಾಯಲ್ಟಿಯಲ್ಲಿ ಅರ್ಧ ಭಾಗ ಸರ್ಕಾರದ ಖಜಾನೆಗೆ ಬರುತ್ತದೆ. ಇನ್ನರ್ಧ ಭಾಗ ಪಂಚಾಯಿತಿಗೆ ಹೋಗುತ್ತದೆ. ಆ ತರಹ ವ್ಯವಸ್ಥೆಯನ್ನು ಮಾಡಿದ್ದೇವೆ. ಹಿಂದೆ ಪಂಚಾಯಿತಿಗಳಿಗೆ ಕೊಟ್ಟಾಗ ಏನಾಗಿತ್ತು ಎಂದರೆ ಒಂದು ಕಡೆ ಪಂಚಾಯಿತಿಗೆ ಕೊಟ್ಟ ಅಧಿಕಾರವನ್ನು ಅವರುಗಳು ಚಲಾಯಿಸಲಿಲ್ಲ. ಮೂರು ವರ್ಷಗಳಾದ ಮೇಲೆ ಅದನ್ನು ವಾಪಸ್ ತೆಗೆದುಕೊಂಡಿದ್ದೇವೆ.

ಅಥಣಿ ತಾಲ್ಲೂಕಿನಲ್ಲಿ ಕುಶಲ ಕರ್ಮಿಗಳಿಗೆ ನಿರ್ಮಿಸಲಾಗಿರುವ ವಸತಿ ಕಾರ್ಯಗಾರಗಳು

99 (1068) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಗಾರಿಕಾ ಇಲಾಖೆಯಿಂದ ಮುಖಾಂತಹ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಕುಶಲಕರ್ಮಿಗಳಿಗೆ ನಿರ್ಮಿಸಲಾಗಿರುವ ವಸತಿ ಕಾರ್ಯಾಗಾರಗಳು ಎಷ್ಟು; (ಗ್ರಾಮವಾರು ವಿವರ ನೀಡುವುದು)

ಆ) ಈ ವಸತಿ ಕಾರ್ಯಾಗಾರಗಳಲ್ಲಿ ವಾಸಿಸುವ ಫಲಾನುಭವಿಗಳಿಗೆ ವಿದ್ಯುತ್, ರಸ್ತೆ, ನೀರು ಕಲ್ಪಿಸದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸವಲತ್ತುಗಳನ್ನು ಒದಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು.

ಇ) 2000-2001ನೇ ವರ್ಷದಲ್ಲಿ ಈ ಯೋಜನೆಯಡಿ ಎಷ್ಟು ವಸತಿ ಕಾರ್ಯಗಾರಗಳನ್ನು ಯೋಜಿಸಿದೆ?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕೆ ಸಚಿವರು) :

ಅ) ಯಾವುದೇ ವಸತಿ ಹಾಗೂ ಕಾರ್ಯಗಾರಗಳನ್ನು ನಿರ್ಮಿಸಿರುವುದಿಲ್ಲ

ಆ) ಅನ್ವಯಿಸುವುದಿಲ್ಲ

ಇ) 2000-2001ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ರಾಜ್ಯಾದಂತ 250 ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಲು ಉದ್ದೇಶಿಸಿದ್ದು 10 ವಸತಿ ಹಾಗೂ ಕಾರ್ಯಗಾರಗಳನ್ನು ಬೆಳಗಾಂ ಜಿಲ್ಲೆಗೆ ಹಂಚಿಕೆ ಮಾಡಲಾಗಿದೆ.

ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಉತ್ತರದಲ್ಲಿ ಯಾವುದೇ ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನಗೆ ಅನಿಸಿದ ಮಟ್ಟಿಗೆ ಈ ಉತ್ತರ ಸರಿ ಇಲ್ಲ. ಏಕೆಂದರೆ ಅಥಣಿ ಪಟ್ಟಣದಲ್ಲಿ 137 ಮತ್ತು ಮದಬಾವಿ ಗ್ರಾಮದಲ್ಲಿ 3 ಈ ರೀತಿ ಅನೇಕ ಸ್ಥಳಗಳಲ್ಲಿ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ಯಾವುದೇ ವಸತಿ ಕಾರ್ಯಗಾರಗಳನ್ನು ನಿರ್ಮಿಸಿಲ್ಲ ಎನ್ನುವಂತಹದು ಇದು ಸರಿಯಲ್ಲ. ಮಾನ್ಯ ಮಂತ್ರಿಗಳಿಗೆ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಪ್ರಶ್ನೆ ಕೇಳು ಉದ್ದೇಶ ಏನು ಅಂದರೆ ಅಲ್ಲಿ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿದ ನಂತರ ಇತರ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ ಮತ್ತು ವಿದ್ಯುತ್ ದೀಪದ ಸವಲತ್ತುಗಳು ಆಗಿಲ್ಲ ಎನ್ನುವ ಉದ್ದೇಶಕ್ಕಾಗಿ ಪ್ರಶ್ನೆ ಕೇಳಿದ್ದೆ. ಆದರೆ ಅವರು ಉತ್ತರದಲ್ಲಿ ಎವುದೇ ಕಾರ್ಯಾಗಾರಗಳನ್ನು ನಿರ್ಮಿಸಿಲ್ಲ ಎಂದು ಹೇಳಿದ್ದಾರೆ. ಈ ಉತ್ತರ ಸರಿ ಇಲ್ಲ ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವಸತಿ ಕಾರ್ಯಾಗಾರ ಎಂದರೆ ಲಿವಿಂಗ್-ಕಮ್-ವರ್ಕ್‌ಶೆಡ್ಸ್ ಎಂದು ಅಲ್ಲಿ ನಿರ್ಮಿಸಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ನಿರ್ಮಿಸಿಲ್ಲ ಎಂದು ಹೇಳುವ ಉತ್ತರ ಸರಿ ಇಲ್ಲ

ಶ್ರೀ ಎಸ್.ಆರ್. ಕಾಶಪ್ಪನವರ್ : ಮಾನ್ಯ ಅಧ್ಯಕ್ಷರೆ, ಅಥಣಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಕುಶಲ ಕರ್ಮಿಗಳಿಗೆ ನಿರ್ಮಿಸಲಾಗಿರುವ ವಸತಿ ಕಾರ್ಯಾಗಾರಗಳು ಎಷ್ಟು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಿಲ್ಲ. ಅದಕ್ಕೂ ಮೊದಲು 243 ವಸತಿ ಗೃಹಗಳನ್ನು ಅಲ್ಲಿ ನಿರ್ಮಿಸಲಾಗಿದೆ ಮತ್ತು ಅಲ್ಲಿ ರಸ್ತೆ ಇಲ್ಲ, ಸೌಲಭ್ಯಗಳು ಇಲ್ಲ ಎನ್ನತಕ್ಕ ವಿಚಾರವನ್ನು ಕೂಡ ನಮ್ಮ ಗಮನಕ್ಕೆ ಈ ಪ್ರಶ್ನೆಯ ಮೂಲಕ ತಂದಿದ್ದೀರಿ. ಅವು ಸ್ಥಳೀಯ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಪುರಸಭೆಗಳು ಅಲ್ಲಿ ಉಳಿದ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಮನೆಗಳನ್ನು ಕಟ್ಟತಕ್ಕ ಕೆಲಸದ ಬಗ್ಗೆ ಹೇಳುವುದಾದರೆ 243 ಕಟ್ಟಡಗಳನ್ನು ಕಟ್ಟಿ ಆಗಿದೆ ಎನ್ನತಕ್ಕ ವಿಷಯವನ್ನು ನಾನು ಸ್ಪಷ್ಟಪಡಿಸಿದ್ದೇನೆ.

ಶ್ರೀ ಡಿ.ಎಸ್. ಇಸ್ಮಾಯಿಲ್ : ಮಾನ್ಯ ಅಧ್ಯಕ್ಷರೆ, ಇದು ಮಂಜೂರಾತಿ ಪೂರ್ವ ಮೂರು ವರ್ಷದ ಮೊದಲು ಆಗಿರಬಹುದು. ಆದರೆ ನಿರ್ಮಾಣ ಕಾರ್ಯ ಮಾತ್ರ ಮೂರು ವರ್ಷಗಳಲ್ಲಿ ಎಷ್ಟು ಆಗಿದೆ ಎಂದು ನನಗೆ ಖಚಿತವಾಗಿ ಗೊತ್ತಿದೆ. ನಾನು ಇನ್ನೂ ಒಂದು ಪ್ರಶ್ನೆಯನ್ನು ಕೇಳಿದ್ದೆ. 2000-01ನೇ ಸಾಲಿನಲ್ಲಿ ಎಷ್ಟು ವಸತಿ ಕಾರ್ಯಾಗಾರಗಳನ್ನು ಮಂಜೂರು ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೆ. ಇದರ ಉತ್ತರ ನನಗೆ ಅನಿಸಿದ ಮಟ್ಟಿಗೆ ಬೆಳಗಾವಿ ಜಿಲ್ಲೆಗೆ ಕೇವಲ ಹತ್ತು ಎಂದು ಕೊಟ್ಟಿದ್ದಾರೆ. ನಾನು ಮಂತ್ರಿಯವರಲ್ಲಿ ವಿನಂತಿಸುವುದು ಎಂದರೆ ಈ ವಸತಿ ಕಾರ್ಯಾಗಾರಗಳನ್ನು ನಿರ್ಮಾಣ ಮಾಡಿದ್ದಾರೆ, ಅವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆ ಕೊಡಿ. ಡಿಎಸ್‌ಎಂಎಸ್ ನವರು ಕಳೆದ ಮೂರ್ನಾಲ್ಕು ವರ್ಷದಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ನಿರ್ಮಾಣ ಆಗಿ ನಾಲ್ಕು ವರ್ಷವಾಗಿದೆ ಎಂಬುದನ್ನು ತಾವು ಒಪ್ಪಿದ್ದೀರಿ. ನಾಲ್ಕು ವರ್ಷದಿಂದ ಈ ಜನ ಆ ಒಂದು ವಸತಿ ಕಾರ್ಯಾಗಾರಗಳಲ್ಲಿ ವಿದ್ಯುತ್ ದೀಪ, ನೀರು ಇಲ್ಲದೆ ಮತ್ತು ರಸ್ತೆಗಳು ಇರಲಾರದೇ ಯಾವ ಪ್ರಕಾರ ತಮ್ಮ ಕೆಲಸ ನಿರ್ವಹಿಸಬೇಕು? ಯಾವ ಪ್ರಕಾರ ತಮ್ಮ ಉಪ ಜೀವನ ಮಾಡಬೇಕು ಎನ್ನುವಂಥದ್ದು ಬಹಳ ಮಹತ್ವದ ವಿಷಯ. ಈ ಡಿಎಸ್‌ಎಂಎಸ್ ಎಂದರೆ ಜಿಲ್ಲಾ ಪೂರೈಕೆ ಹಾಗೂ ಮಾರುಕಟ್ಟೆ ಸೇವೆಯನ್ನು ನಿರ್ಮಾಣ

ಮಾಡಿರುವಂತಹ ವಸತಿ ಕಾರ್ಯಾಗಾರಗಳು. ನಾಲ್ಕು ವರ್ಷಗಳಿಂದ ಇಲ್ಲಿ ಮೂಲಭೂತ ಸೌಕರ್ಯಗಳು ಆಗಿಲ್ಲ. ಅದಕ್ಕೆ ತಾವು ಇದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಿ ಸಂಬಂಧಪಟ್ಟ ಇಲಾಖೆಯವರಿಗೆ ಪತ್ರ ಬರೆದು ಯಾವಾಗ ಮೂಲಭೂತ ಸೌಕರ್ಯಗಳನ್ನು ಕೊಡಿಸುತ್ತೀರಿ ಎನ್ನುವುದನ್ನು ದಯಮಾಡಿ ಸ್ಪಷ್ಟಪಡಿಸಬೇಕು ಎಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಕಾಶಪ್ಪನವರ್ : ಸ್ಥಳೀಯ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಅಲ್ಲಿಯ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳ ಮೂಲಕ ಅಲ್ಲಿ ಅಗತ್ಯ ಸೌಲಭ್ಯಗಳನ್ನು ಕೊಡಿಸುವುದಕ್ಕೆ ಈಗಾಗಲೇ ನಾವು ಅವರಿಗೆ ವಿನಂತಿಯನ್ನು ಕೂಡ ಮಾಡಿಕೊಂಡಿದ್ದೇವೆ. ಅದರ ಪ್ರಕಾರ ಮತ್ತೊಮ್ಮೆ ತಮ್ಮ ಕೋರಿಕೆಯ ಪ್ರಕಾರ ಕ್ರಮವನ್ನು ಮಾಡಲಾಗುವುದು ಮತ್ತು ಬೆಳಗಾಂ ಜಿಲ್ಲೆಯಲ್ಲಿ ತಾವು ಎಷ್ಟು ಮನೆಗಳನ್ನು ಕಟ್ಟುತ್ತಿದ್ದೀರಿ ಎನ್ನತ್ಕಿ ವಿಷಯವನ್ನು ತಿಳಿಸುವುದಾದರೆ ಈ ವರ್ಷ ಹತ್ತು ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲಿನ ಜಾಯಿಂಟ್ ಡೈರೆಕ್ಟರ್ ಮೂಲಕ ಈ ಕಾರ್ಯಕ್ರಸವನ್ನು ಮಾಡುತ್ತೇವೆ. ಫಲಾನುಭವಿಗಳ ಆಯ್ಕೆಯನ್ನು ಕೂಡ ಅವರೇ ಮಾಡುತ್ತಾರೆ ಎನ್ನುವ ಮಾತನ್ನು ತಿಳಿಸುತ್ತಾ ವಿಶೇಷವೇನಾದರೂ ಇದ್ದರೆ ತಾವು ನನಗೆ ಪತ್ರವನ್ನು ಬರೆಯಿರಿ. ಅಗತ್ಯ ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಕೂಡ ಹೇಳಬಯಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವು ನಾಯಕ್ ಬೆಳಮಗಿ ಅವರ ಮುಂದಿನ ಪ್ರಶ್ನೆ ಆರ್ ಡಿಪಿಆರ್‌ಗೆ ವರ್ಗಾವಣೆ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಬಹಳ ಇಂಪಾರ್ಟೆಂಟ್ ಕ್ವೆಶ್ಚನ್.

ಅಧ್ಯಕ್ಷರು : ಒಪ್ಪಿಕೊಂಡೆ, ಪ್ರಶ್ನೆ ಬೇರೆ ಇಲಾಖೆಗೆ ಹೋಗಿದೆ. ಅವರ್ಯಾರೂ ಉತ್ತರ ಕೊಟ್ಟಿಲ್ಲ; ಮಂದೆ ಹಾಕಿಕೊಳ್ಳೋಣ.

ಗಂಗಾ ಕಲ್ಯಾಣ ಯೋಜನೆ

101 (841) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನಾಂಗದವರಿಗೆ 2000-2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಗೆ ನೀರಾವರಿ ಒದಗಿಸಲು ನಿಗದಿಪಡಿಸಿದ ಗುರಿಯೇನು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)

ಆ) ಈವರೆಗೆ ಸಾಧಿಸಿದ ಪ್ರಗತಿಯೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರಿಗೆ 2000-2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ನೀರಾವರಿ ಸೌಲಭ್ಯ ಒದಗಿಸಲು ನಿಗಧಿಪಡಿಸಲಾಗಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ ಎ ಮತ್ತು ಬಿ ನಲ್ಲಿ ನೀಡಲಾಗಿದೆ.